# 'ಸುಧಾ' ಜೊತೆಗಿನ ಓದುಗರ ಒಡನಾಟ

## ಮರೆಯದ ಸಂಬಂಧ!

60ರ ದಶಕದಲ್ಲಿ 'ಸುಧಾ' ಪ್ರಕಟಣೆ ಪ್ರಾರಂಭಿಸಿದಾಗ ನಮ್ಮ ಮನೆಯಲ್ಲಿ ಎಲ್ಲರೂ ನನ್ನನ್ನು ರೇಗಿಸುತ್ತಿದ್ದರು. ನಮ್ಮ ಮನೆಯಲ್ಲಿ ನನ್ನನ್ನು 'ಸುಧಾ' (ಕರ) ಎಂದೇ ಕರೆಯುತ್ತಿದ್ದುದು. ನನ್ನ ಮೊದಲ ಚಿತ್ರ ಲೇಖನ ಪ್ರಕಟವಾದದ್ದು 'ಸುಧಾ'ದಲ್ಲಿ ಎಂಬುದು ನನಗೆ ಹೆಮ್ಮೆಯ ವಿಚಾರ.

ನಂತರ ಹಲವು ಅಂಕಣಗಳಲ್ಲಿ ನನ್ನ ಬರಹಗಳು ಚಿತ್ರಸಮೇತ ಪ್ರಕಟವಾದವು. ಗೆಳೆಯನ ಲೇಖನದೊಂದಿಗೆ ನಾನು ಸೆರೆಹಿಡಿದ ಚಿತ್ರಗಳು ಆಗಾಗ್ಗೆ ಪ್ರಕಟವಾಗಿ ನಮ್ಮನ್ನು ಜನಪ್ರಿಯರನ್ನಾಗಿಸಿದ್ದವು. ನನ್ನ ಪತ್ನಿ ಮಲೆಯಾಳಿಯಾದರೂ 'ಸುಧಾ' ಅಭಿಮಾನಿ.

—ಕೊ.ಸು. ನರಸಿಂಹ ಮೂರ್ತಿ, ಮೈಸೂರು

## ಅರಿವಿನ ಅಕ್ಷಯ ಪಾತ್ರೆ

'ಸುಧಾ' ಕನ್ನಡ ನಾಡಿನ ಓದುಗರ ಜ್ಞಾನಕ್ಷಿತಿಜ ವಿಸ್ತರಿಸಿದ ಪತ್ರಿಕೆ. ಆಬಾಲವೃದ್ಧರಿಗೆ ಸಾಹಿತ್ಯದ ಸುಧೆ ಉಣಿಸಿ ಅವರ ಅರಿವಿನ ಮೇರೆ ವಿಸ್ತರಿಸಿದೆ. ಕಳೆದ 55 ವರ್ಷಗಳಿಂದ ನಾನು 'ಸುಧಾ' ಓದುಗ. ನನ್ನ ಅಭಿವ್ಯಕ್ತಿಗೆ ಅವಕಾಶ ನೀಡಿ ಸಾಹಿತ್ಯದ ಆಸಕ್ತಿಗೆ ನೀರೆರೆದಿದೆ 'ಸುಧಾ'.

60 ವರ್ಷಗಳ ಅವಧಿಯಲ್ಲಿ 'ಸುಧಾ', ಓದುಗರಿಗೆ ಸಂಗ್ರಹಯೋಗ್ಯ, ವಿವೇಕ ವರ್ಧಿಸುವ ಜ್ಞಾನ ನೀಡಿರುವುದು ಶ್ಲಾಘನೀಯ. ಉದಯೋನ್ಮುಖ ಲೇಖಕರಿಗೆ ಉತ್ತೇಜನ ನೀಡಿ ಉತ್ಸಾಹ ತುಂಬುವ ಪತ್ರಿಕೆ. ಸರ್ವಸಂಗತಿಗಳನ್ನು ಓದುಗರಿಗೆ ಪರಿಚಯಿಸುತ್ತಾ ಶತ ಸಂವತ್ಸರಗಳ ಸಾರ್ಥಕ ಸಮಾರಂಭ ಆಚರಿಸಿಕೊಳ್ಳಲಿ.

—ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ

## ಮನೆಗೆ ಧಾರಾವಾಹಿ ಹೆಸರು!

ನಾನು 50 ವರ್ಷಗಳಿಂದ 'ಸುಧಾ' ಓದುತ್ತಿದ್ದೇನೆ. ಆಗ 'ನೀವು ಕೇಳಿದಿರಿ' ವಿಭಾಗಕ್ಕೆ ಬೀಚಿ ಉತ್ತರಿಸುತ್ತಿದ್ದರು. ನಾನು ಒಂದೆರಡು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದಿದ್ದೆ. ಅದಿನ್ನೂ ನನ್ನ ಮನಸ್ಸಿನಲ್ಲಿ ಹಸುರಾಗಿದೆ. ಕಾಮನಬಿಲ್ಲು, ಅಮೃತಘಳಿಗೆ, ಅಂತ, ಬೆಳದಿಂಗಳ ಬಾಲೆ, ಸಾಕಷ್ಟು ಕಥೆಗಳನ್ನು ಓದಿ ಸಂತಸಪಟ್ಟಿದ್ದೇನೆ. ಲೇಖಕಿ ಉಷಾ ನವರತ್ನರಾಮ್ ಅವರ 'ಹೊಂಬಿಸಿಲು' ನನ್ನ ನೆಚ್ಚಿನ ಧಾರಾವಾಹಿ. ಆ ಧಾರಾವಾಹಿ ಓದುವಾಗ, ಮನೆ ಕಟ್ಟಿದರೆ ಅದೇ ಹೆಸರಿಡಬೇಕು ಎಂದುಕೊಂಡಿದ್ದೆ. ಆ ಆಸೆ 35 ವರ್ಷಗಳ ನಂತರ ನನಸಾಯಿತು. ಈಗ ನನ್ನ ಪುಟ್ಟ ಮನೆಗೆ 'ಹೊಂಬಿಸಿಲು' ಎಂದೇ ಹೆಸರಿಟ್ಟಿದ್ದೇನೆ.

—ಹೆಚ್.ಆರ್. ರತ್ನ, ಚಿಕ್ಕಮಗಳೂರು

## ನಂ ಜೊತೆಗಾತಿಯಾಗಿರೋವಾಗ...

ಮರೆವು, ಬರ್‍ದ್ಯಾಡ್ ನೀ ನನ ಸಂಗ,
ನನ್ಗೆಲ್ಲ 'ಸುಧಾ' ಅದಾಳ ನನ್ನೊಡಿ,
ನನಗ್ ಬ್ಯಾಡಾ, ಮತ್ಯಾರ ಸಂಗ!
ಮಾಡ್ತ್ಯಾಳ, ನನ್ನುತ್ತಾ ಅವಳ್ದೇ ಮೋಡಿ,
ನನ್ಗೆಲ್ಲ ಸಂಗಾ, ನನಗ ಸಮಯ
ಬಂಗಾರದ್ದಾಂಗಾ, ನೋಡಿ,
ಆಕಾಶ್ದಾಗ ನಕ್ಷತ್ರ ಹೊಳೆದ್ದಾಂಗ,
ಜ್ಞಾನಜ್ಯೋತಿ ಬೆಳಗೋ ದೀಪಗಳ್ದಾಂಗಾ,
ನಲಿ ನಲಿತಾ ಪ್ರತಿವಾರ ಬರ್ತಾಳ,
ತುಂಬಿ ತುಂಬಿ ಜ್ಞಾನಧಾರಿ ಎರೀತಾಳಾ,
ತಾಯಿ 'ಶಾರದೆ' ಹಾಂಗಾ...
ಮರೆಯಲಿ ಹ್ಯಾಂಗ,
ಮರೀಲಾರೆ... ಮರೀಬೇಕಂದ್ರೂ...
ನಾ ವಲ್ಲೇ...
ಕುಂತಾಳ ಪಟ್ಟಾಗಿ ನನ್ನ್ಹೃದಯದಾಗ
ದೇವಿ ವಿಗ್ರಹದ್ದಾಂಗ,
ನನ್ನನಿ ಮನ ತುಂಬ್ಯಾಳ
ಮನೀದೇವತೀ ಹಾಂಗಾ,
ಖರೇ ಅದ ನೋಡ್ರೀ ಮತ್ತ...
ನಿಮ್ಗೂ ಆಗಿರ್ಲೇಬೇಕು ಹೀಂಗ,
ಒಂದಿನ ತಡ ಆದ್ರೂ ಮನ್ಸು ತಡೀವಲ್ದು,
ಕನವರ್ಸಿ, ಎದುರು ನೋಡ್ತಿರ್ತೀನಿ,
ಬಂದಾಳಾ, ಬಾರಳಾ... ನನ್ಗೆಳತಿ ಅಂತಿರ್ತೀನಿ,
ಗುರುವಾರ್ ಮುಂಜಾನಿ...
ನನ್ಗೆಲ್ಲ ಬಂದು 'ಗುಡ್ ಮಾರ್ನಿಂಗ್'
ಅಂದ್ರ ಸಾಕು,
ಬಣ್ಣದ್ ಚಿಟ್ಟೆ ಹಾರಾಡ್ತಾವಾ ಎದಿಯೊಳಗ
ಹೀಂಗ... ಹಿಡಿದು... ಓದಿ, ಕಲೀತೀನಿ...
ನಲೀತೀನಿ, ಬೆಳೀತೀನಿ...
ಮರೆಯಲಿ ಹ್ಯಾಂಗ ನನ್ಗೆಳತಿ ನಿನ್ನ,
'ಸುಧಾ'... ನನ್ನುಧಾ... ನೀ
ನಂಜೊತೆಗಾತಿಯಾಗಿರೋವಾಗ..

—ಸುಮನಾ

## ಬದುಕಿನುದ್ದಕ್ಕೂ ಬಂದವಳೇ...

'ಸುಧಾ', ನೀನು ನನಗೆ ಬದುಕಿನುದ್ದಕ್ಕೂ ದಾರಿದೀಪ. 6ನೇ ಕ್ಲಾಸಿದ್ದಾಗ ಪಕ್ಕದ ಮನೆಯವರು ತರಿಸುತ್ತಿದ್ದ 'ಸುಧಾ'ದಲ್ಲಿ ರಂಗೋಲಿ ಆಕರ್ಷಣೆಗೆ ಬಿದ್ದ ಮುಗ್ಧ ವಯಸ್ಸು. ಮುಂದೆ ಅಮ್ಮ, ಅಪ್ಪನಿಗೆ ದುಂಬಾಲು ಬಿದ್ದು 'ಸುಧಾ' ನಮ್ಮ ಮನೆಗೆ ಬರುವಂತಾಯ್ತು. ಅಕ್ಕ, ನಾನು, ತಮ್ಮ, ಪತ್ರಿಕೆ ಬರುವುದನ್ನೇ ಕಾದು, ಕಿತ್ತಾಡಿ ಓದಿದ ಸವಿನೆನಪು. ಕಥೆ, ಧಾರಾವಾಹಿ ಓದುತ್ತಾ ಕನಸಿನ ಲೋಕದಲ್ಲಿ ವಿಹರಿಸಿದ ಅನುಭವ ಹದಿವಯಸ್ಸಿನಲ್ಲಿ. ಪ್ರಬುದ್ಧ ವಯಸ್ಸಿಗೆ ಬಂದಂತೆ ವೈಚಾರಿಕ ಲೇಖನಗಳನ್ನು ಓದುತ್ತಾ ಆಂತರಿಕವಾಗಿ ಬದಲಾವಣೆ ಆಗಿದ್ದು ಉತ್ಪ್ರೇಕ್ಷೆಯಲ್ಲ.

ಕೆ.ಟಿ. ಗಟ್ಟಿ, ದೊಡ್ಡೇರಿ ವೆಂಕಟಗಿರಿರಾವ್, ಯಂಡಮೂರಿ, ವಸುಮತಿ ಉಡುಪ ಅವರ ಕಾದಂಬರಿಯಲ್ಲಿನ ಉದಾತ್ತ ಪಾತ್ರಗಳು ಜೀವನದುದ್ದಕ್ಕೂ ಬಹಳ ಪ್ರಭಾವ ಬೀರಿವೆ. ಸಮಾಜದ ಓರೆಕೋರೆಗಳನ್ನು ಬೆರಳು ತೋರಿಸುವ ಹಾಗೆ ಬರೆವ 'ನಿಮ್ಮೊಡನೆ' ಲೇಖನಗಳು, ಸನ್ಮಾರ್ಗದತ್ತ ನಡೆಸುವ 'ಮಾತೇ ಮುತ್ತು', 'ವಿಚಾರಲಹರಿ', ಕ್ರೀಡಾಜಗತ್ತಿನಲ್ಲಿ ಸಾಧಿಸಿದವರ ಪರಿಚಯ, ಸಮಾಜಕ್ಕಾಗಿ ಉತ್ತಮ ಕಾರ್ಯಗಳನ್ನು ಮಾಡಿದ ಮಹನೀಯರ ಕುರಿತ 'ಸೆಲೆಬ್ರಿಟಿ', ಅಬ್ಬಾ... ಒಂದಾ, ಎರಡಾ?

ಎಷ್ಟೆಲ್ಲಾ ಜ್ಞಾನಸುಧೆ ಹರಿಸಿ, ಪ್ರವಾಸಿ ತಾಣಗಳಿಗೂ ಕರೆದೊಯ್ದು, ಸಂಗೀತ ಸಾಧಕರ ಇಂಪನ್ನು ಉಣಬಡಿಸಿ, ಪ್ರಕೃತಿ ಸೌಂದರ್ಯವನ್ನು ಆಹ್ಲಾದ ನೀಡುವಂತೆ ಚಿತ್ರಿಸಿದ 'ಸುಧಾ', ನೀನು ಎಂದಿಗೂ ಅಚ್ಚುಮೆಚ್ಚಿನ ಗೆಳತಿಯೇ. ತವರಿನಲ್ಲಿ ಎಲ್ಲರೂ ಸೇರಿದಾಗ ಈಗಲೂ 'ಪದಬಂಧ' ಬಿಡಿಸುವುದನ್ನು ಮರೆಯುವುದಿಲ್ಲ.

—ಶಕುಂತಲ ರೆಡ್ಡಿ, ರಾಮಾಪುರ

## ಮುದ ತರುವ ಓದು

'ಸುಧಾ' ಜೊತೆಗೆ 1968ರಿಂದಲೇ ಗೆಳೆತನ ಶುರುವಾಯಿತು. ಬಹಳ ಹಿಂದೆ ನನ್ನ ಪುಟ್ಟಕಥೆ 'ಎಳೆಯರ ಅಂಗಳ'ದಲ್ಲಿ ಪ್ರಕಟಗೊಂಡಿತ್ತು. 1974ರಲ್ಲಿ ಅಖಿಲ ಭಾರತ ಮಕ್ಕಳ ಸಮ್ಮೇಳನದಲ್ಲಿ ಗರಿಷ್ಠ ಪ್ರಥಮ ಬಹುಮಾನಗಳನ್ನು ಗೆದ್ದಿದ್ದೆ. ಅಖಿಲ ಭಾರತ ಆಕಾಶವಾಣಿ ಯುವಕವಿ ಸಮ್ಮೇಳನದಲ್ಲಿ, ಡಾ. ಎಚ್. ನರಸಿಂಹಯ್ಯ ಅವರಿಂದ 'ಬಾಲ ಕವಿ' ಎಂದು ಆಶೀರ್ವದಿಸಿಕೊಂಡೆ. ನನ್ನದೊಂದು ಕಥೆ ಬಹುಮಾನ ಪಡೆಯಿತು. ಈ ಎಲ್ಲದರ ಹಿಂದೆಯೂ 'ಸುಧಾ' ಓದು ಅಡಗಿತ್ತು ಎಂದರೆ ತಪ್ಪಿಲ್ಲ. ಬಾಲ್ಯದಿಂದಲೂ 'ಸುಧಾ' ಓದು ಮುದ ತರುವ ಭಾವ. ಈಗ ನಾನು ನಿವೃತ್ತ ಕೆಎಎಸ್ ಅಧಿಕಾರಿ. ಈಗಲೂ 'ಸುಧಾ' ಓದು ಮುಂದುವರೆದಿದೆ.

—ಎಸ್.ಕೆ. ಕುಮಾರ್, ಬೆಂಗಳೂರು